ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೭

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೊಂಭತ್ತನೆಯ ಅಧಿವೇಶನ

**ಮಂಗಳವಾರ, ದಿನಾಂಕ : ೨೫ನೇ ಆಗಸ್ಟ್, ೨೦೨೬**

---

**ಸಮೂಹ – II**

೧. ವಸತಿ ಸಚಿವರು

೨. ಕೃಷಿ ಸಚಿವರು

೩. ಸಕ್ಕರೆ ಮತ್ತು ಜವಳಿ ಸಚಿವರು

೪. ಸಹಕಾರ ಸಚಿವರು

೫. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

೬. ಪೌರಾಡಳಿತ ಸಚಿವರು

---

## ಪಶುಸಂಗೋಪನೆ ಇಲಾಖೆಯಿಂದ ರೈತರಿಗೆ ರೂಪಿಸಿರುವ ಯೋಜನೆಗಳ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೧ (೧೦೫೧) ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಜಾನುವಾರು ಗಣತಿಗೆ ಅನುಗುಣವಾಗಿ ಪಶು ಆಸ್ಪತ್ರೆಗಳನ್ನು ನಿರ್ಮಿಸಲಾಗಿದೆಯೇ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಪಶುಸಂಗೋಪನೆ ಇಲಾಖೆಯಿಂದ ರೈತರಿಗೆ ಹಾಗೂ ಹೈನುಗಾರಿಕೆಗೆ ಅನುಕೂಲವಾಗಲು ರೂಪಿಸಿರುವ ಯೋಜನೆಗಳಾವುವು ; (ಯೋಜನಾವಾರು ಮಾಹಿತಿ ಒದಗಿಸುವುದು)

(ಇ) ಸದರಿ ಯೋಜನೆಗಳ ಪೈಕಿ ಧಾರವಾಡ ಜಿಲ್ಲೆಗೆ ಬಿಡುಗಡೆಯಾದ ಅನುದಾನವೆಷ್ಟು ; (ಯೋಜನಾವಾರು ಮಾಹಿತಿ ಒದಗಿಸುವುದು)

(ಈ) ೨೦೨೩ನೇ ಸಾಲಿನಿಂದ ಧಾರವಾಡ ಜಿಲ್ಲೆಗೆ ಇಲ್ಲಿಯವರೆಗೆ ಸದರಿ ಯೋಜನೆಗಳನ್ನು ಪಡೆಯಲು ಸಲ್ಲಿಕೆಯಾಗಿರುವ ಅರ್ಜಿಗಳೆಷ್ಟು ಹಾಗೂ ತಿರಸ್ಕೃತಗೊಂಡಿರುವ ಅರ್ಜಿಗಳೆಷ್ಟು ? (ಜಿಲ್ಲಾವಾರು/ತಾಲ್ಲೂಕುವಾರು/ ಯೋಜನಾವಾರು ಮಾಹಿತಿ ಒದಗಿಸುವುದು)

## ವಸತಿ ಯೋಜನೆಯಡಿಯಲ್ಲಿ ಮನೆಗಳ ಬಗ್ಗೆ

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೯೨ (೧೦೦೩) ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಯಡಿ ಕಾಳಗಿ ತಾಲ್ಲೂಕಿಗೆ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ ; (ಪಂಚಾಯತಿವಾರು ವಿವರಗಳನ್ನು ನೀಡುವುದು)

(ಆ) ಮಂಜೂರಾದ ಮನೆಗಳ ವಿವಿಧ ಹಂತಗಳೇನು ; ಈ ಮನೆಗಳಲ್ಲಿ ಎಷ್ಟು ಮನೆಗಳನ್ನು ಪೂರ್ಣಗೊಳಿಸಲಾಗಿದೆ ; ಎಷ್ಟು ಫಲಾನುಭವಿಗಳ ಖಾತೆಗೆ ಹಣ ಜಮಾ ಮಾಡಲಾಗಿದೆ ; ಎಷ್ಟು ಬಾಕಿ ಇದೆ ;

(ಇ) ಹಣ ಜಮಾವಣೆ ಮಾಡಲು ಬಾಕಿಯಿರುವ ಫಲಾನುಭವಿಗಳ ಖಾತೆಗೆ ಯಾವಾಗ ಹಣ ಜಮಾ ಮಾಡಲಾಗುವುದು ? (ಮಾಹಿತಿ ನೀಡುವುದು)

## ಪಶುಸಂಗೋಪನೆ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳ ಬಗ್ಗೆ

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೩ (೧೦೭೩) ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ಪಶು ಆಸ್ಪತ್ರೆಗಳು ಎಷ್ಟು ; ಈ ಆಸ್ಪತ್ರೆಗಳಿಗೆ ಮಂಜೂರಾಗಿರುವ ಹುದ್ದೆಗಳು ಎಷ್ಟು ; ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಹುದ್ದೆಗಳು ಎಷ್ಟು ; (ಸಂಪೂರ್ಣವಾದ ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಪ್ರಸ್ತುತ ಹೊರ ಗುತ್ತಿಗೆ ಹಾಗೂ ಖಾಲಿ ಇರುವ ಹುದ್ದೆಗಳು ಎಷ್ಟು ; ಸದರಿ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ರಾಜ್ಯದ ಎಲ್ಲಾ ಪಶು ಆಸ್ಪತ್ರೆಗೆ ಪ್ರತಿ ವರ್ಷಕ್ಕೆ ಔಷಧಿಗಳ ಖರೀದಿಗೆ ನೀಡುತ್ತಿರುವ ಅನುದಾನವೆಷ್ಟು ? (ಜಿಲ್ಲಾವಾರು ಅನುದಾನ ನೀಡಿರುವ ಬಗ್ಗೆ ಸಂಪೂರ್ಣವಾದ ಮಾಹಿತಿ ನೀಡುವುದು)

## ಕೊಡಗು ಜಿಲ್ಲೆಯಲ್ಲಿ ಪಶುಸಂಗೋಪನಾ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೪ (೧೦೬೧) ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿ ಪಶುವೈದ್ಯಾಧಿಕಾರಿಗಳು ಹಾಗೂ ಪಶುವೈದ್ಯಕೀಯ ಸಿಬ್ಬಂದಿಯ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು ; ಪ್ರಸ್ತುತ ಎಷ್ಟು ಹುದ್ದೆಗಳು ಖಾಲಿ ಇವೆ ; ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಕೊಡಗು ಜಿಲ್ಲೆಯಲ್ಲಿ ಒಟ್ಟು ಎಷ್ಟು ಪಶುವೈದ್ಯಕೀಯ ಆಸ್ಪತ್ರೆ ಮತ್ತು ಚಿಕಿತ್ಸಾ ಕೇಂದ್ರಗಳಿವೆ ; ಸ್ವಂತ ಕಟ್ಟಡ ಇಲ್ಲದ ಅಥವಾ ದುರಸ್ತಿ ಅಗತ್ಯವಿರುವ ಕೇಂದ್ರಗಳ ಸಂಖ್ಯೆ ಎಷ್ಟು ;

(ಇ) ಕೊಡಗು ಜಿಲ್ಲೆಯ ಗುಡ್ಡಗಾಡು ಮತ್ತು ದೂರದ ಗ್ರಾಮಗಳಲ್ಲಿ ಜಾನುವಾರುಗಳಿಗೆ ತುರ್ತು ಪಶುವೈದ್ಯಕೀಯ ಸೇವೆ ದೊರೆಯಲು ಮೊಬೈಲ್ ಪಶುವೈದ್ಯಕೀಯ ಘಟಕಗಳ ವ್ಯವಸ್ಥೆ ಇದೆಯೇ ; ಇಲ್ಲದಿದ್ದರೆ, ಇಂತಹ ಘಟಕಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಈ) ಕೊಡಗು ಜಿಲ್ಲೆಯ ಹೈನುಗಾರರಿಗೆ ಹಸು, ಎಮ್ಮೆ ಖರೀದಿ, ಕೊಟ್ಟಿಗೆ ನಿರ್ಮಾಣ, ಮೇವು ಮತ್ತು ಇತರ ಸೌಲಭ್ಯಗಳಿಗಾಗಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಅನುದಾನ ನೀಡಲಾಗಿದೆ ; ಎಷ್ಟು ಫಲಾನುಭವಿಗಳು ಪ್ರಯೋಜನ ಪಡೆದಿದ್ದಾರೆ ?

## ಅನುಗ್ರಹ ಯೋಜನೆಯಡಿಯಲ್ಲಿ ಅನುದಾನ ಬಿಡುಗಡೆ ಮಾಡುವ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) –**

೯೫ (೧೦೫೮) ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರ ಅನುಗ್ರಹ ಯೋಜನೆಯನ್ನು ಯಾವಾಗ ಜಾರಿಗೆ ತಂದಿತು ; ಸದರಿ ಯೋಜನೆಯ ಉದ್ದೇಶವೇನು ;

(ಆ) ಮರಣ ಹೊಂದಿದ ಹಸು–ಎಮ್ಮೆ, ಕುರಿ, ಮೇಕೆ ಮುಂತಾದ ಪ್ರಾಣಿಗಳಿಗೆ ಅನುಗ್ರಹ ಯೋಜನೆಯಲ್ಲಿ ವಿತರಿಸುವ ಪರಿಹಾರವೆಷ್ಟು ;

(ಇ) ಅನುಗ್ರಹ ಯೋಜನೆಗೆ ಪ್ರತಿ ವರ್ಷ ಬಜೆಟ್‌ನಲ್ಲಿ ನಿಗದಿಪಡಿಸಿದ ಅನುದಾನವೆಷ್ಟು ; ಬಿಡುಗಡೆಯಾದ ಅನುದಾನವೆಷ್ಟು ; (ವರ್ಷವಾರು ವಿವರ ನೀಡುವುದು)

(ಈ) ೨೦೨೩–೨೪ ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಆಕಸ್ಮಿಕವಾಗಿ ಮೃತಪಟ್ಟ ಜಾನುವಾರು ಮತ್ತು ಕುರಿ–ಮೇಕೆಗಳ ಸಂಖ್ಯೆ ಎಷ್ಟು ; ನೀಡಿದ ಪರಿಹಾರವೆಷ್ಟು ; ಬಾಕಿಯಿರುವ ಪರಿಹಾರದ ಮೊತ್ತವೆಷ್ಟು ; (ಜಿಲ್ಲಾವಾರು, ವರ್ಷವಾರು ವಿವರ ನೀಡುವುದು)

(ಉ) ಜಾನುವಾರುಗಳನ್ನು ಕಳೆದುಕೊಂಡ ಪಶುಪಾಲಕರು ಮತ್ತು ಕುರಿಗಾಹಿಗಳು ಪರಿಹಾರಕ್ಕಾಗಿ ಕಾಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಶೀಘ್ರವಾಗಿ ಅನುದಾನ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ವಿವಿಧ ವಸತಿ ಯೋಜನೆಗಳ ಕುರಿತು

**ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೬ (೧೦೭೬) ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮ ಪಂಚಾಯತ್‌ಗಳಿಗೆ ವಿವಿಧ ವಸತಿ ಯೋಜನೆಗಳಡಿಯಲ್ಲಿ ಮನೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ ; ಇದ್ದರೆ, ಪ್ರತಿ ಗ್ರಾಮ ಪಂಚಾಯತ್‌ಗಳಿಗೆ ಎಷ್ಟು ಮನೆಗಳನ್ನು ಯಾವ ಕಾಲಮಿತಿಯೊಳಗೆ ಮಂಜೂರು ಮಾಡಲಾಗುವುದು ;

(ಆ) ಕಳೆದ ಮೂರು ವರ್ಷಗಳಲ್ಲಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ವಿವಿಧ ವಸತಿ ಯೋಜನೆಗಳಡಿ ಮಂಜೂರಾದ ಮನೆಗಳ ವಿವರಗಳನ್ನು ಯೋಜನೆವಾರು, ವರ್ಷವಾರು ಮತ್ತು ಗ್ರಾಮ ಪಂಚಾಯತ್‌ವಾರು ನೀಡುವುದು ;

(ಇ) ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ವಿವಿಧ ವಸತಿ ಯೋಜನೆಗಳಡಿಯಲ್ಲಿ ಹೊಸದಾಗಿ ಮನೆಗಳನ್ನು ಮಂಜೂರು ಮಾಡಲಾಗಿದೆಯೇ ? (ವರ್ಷವಾರು ವಿವರಗಳನ್ನು ನೀಡುವುದು)

## ಬೀದರ್ ಜಿಲ್ಲೆಯಲ್ಲಿ ‘೧೯೬೨ ಸಂಚಾರಿ ಪಶುಚಿಕಿತ್ಸಾ ಘಟಕ’ಗಳ ಸೇವೆ ಕುರಿತು

**ಡಾ. ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) –**

೯೭ (೧೦೧೮) ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ‘೧೯೬೨ ಸಂಚಾರಿ ಪಶುಚಿಕಿತ್ಸಾ ಘಟಕ’ಗಳ ಸೇವೆಗೆ ರೈತರಿಂದ ಹೆಚ್ಚಿನ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಪ್ರಸ್ತುತ ಬೆಳಿಗ್ಗೆ ೯ ರಿಂದ ಸಂಜೆ ೫ ರವರೆಗೆ ಸೇವೆ ಲಭ್ಯವಿದ್ದು ರಾತ್ರಿ ವೇಳೆಯ ತುರ್ತು ಚಿಕಿತ್ಸೆಗೆ ತೊಂದರೆಯಾಗುತ್ತಿರುವುದು ನಿಜವೇ ; ಸೇವೆಯ ಸಮಯ ವಿಸ್ತರಣೆ ಹಾಗೂ ಹೆಚ್ಚುವರಿ ವಾಹನ ಮಂಜೂರಿಗೆ ಕ್ರಮ ಕೈಗೊಳ್ಳಲಾಗುವುದೇ ;

(ಇ) ಜಿಲ್ಲೆಯ ವಿವಿಧ ಸಂಚಾರಿ ಘಟಕಗಳಲ್ಲಿ ಖಾಲಿ ಇರುವ ಪಶುವೈದ್ಯರು ಹಾಗೂ ಸಿಬ್ಬಂದಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮಗಳೇನು ;

(ಈ) ಈ ಯೋಜನೆಯಿಂದಾಗಿ ಜಿಲ್ಲೆಯಲ್ಲಿ ಹಾಲಿನ ಉತ್ಪಾದನೆ ಹೆಚ್ಚಾಗಿರುವುದು ನಿಜವೇ ; ಹಾಗಿದ್ದಲ್ಲಿ, ಜಿಲ್ಲೆಯ ಎಲ್ಲಾ ಭಾಗಗಳಿಗೂ ಈ ಸೇವೆಯನ್ನು ಪರಿಣಾಮಕಾರಿಯಾಗಿ ವಿಸ್ತರಿಸಲು ರೂಪಿಸಿರುವ ಯೋಜನೆಯೇನು ?

## PM MITRA ಯೋಜನೆ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೯೮ (೧೦೦೭) ಸಕ್ಕರೆ ಮತ್ತು ಜವಳಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಧ್ಯಪ್ರಾಚ್ಯ ಸಂಘರ್ಷದಿಂದಾಗಿ ಭಾರತದ ಒಟ್ಟು ಜವಳಿ ರಫ್ತಿನಲ್ಲಿ ಶೇ.೨೦ರಷ್ಟು ಕೊಡುಗೆ ನೀಡುವ ಕರ್ನಾಟಕಕ್ಕೆ ಈ ಸಂಘಷದಿಂದ ಎಷ್ಟು ನಷ್ಟ ಉಂಟಾಗಿದೆ ; ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮವೇನು ;

(ಆ) ದೇಶಾದ್ಯಂತ ಏಳು ಸ್ಥಳಗಳಲ್ಲಿ ಒಂದಾದ ಕಲಬುರಗಿಯಲ್ಲಿ "Pradhan Mantri Mega Integrated Textile Region and Apparel (PM MITRA)" ಯೋಜನೆಯಲ್ಲಿ ಕೇಂದ್ರದ ಪಾಲು ಮತ್ತು ರಾಜ್ಯದ ಪಾಲು ಎಷ್ಟು ;

(ಇ) ಈ ಯೋಜನೆಗೆ ಕೇಂದ್ರ ಸರ್ಕಾರದ ವತಿಯಿಂದ ಎಷ್ಟು ಅನುದಾನ ಸ್ವೀಕರಿಸಲಾಗಿದೆ ಮತ್ತು ಈ ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ ? (ಮಾಹಿತಿ ನೀಡುವುದು)

## ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆ ಮತ್ತು ಅವರ ಸೇವಾ ಖಾಯಂಗೊಳಿಸುವಿಕೆಯ ಕುರಿತು

**ಶ್ರೀ ಶಿವಣ್ಣ ಬಿ.ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) –**

೯೯ (೯೮೪) ಪೌರಾಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಮಹಾನಗರ ಪಾಲಿಕೆಗಳು, ನಗರಸಭೆಗಳು, ಪುರಸಭೆಗಳು ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಒಟ್ಟು ಪೌರಕಾರ್ಮಿಕರ ಸಂಖ್ಯೆ ಎಷ್ಟು ; (ನಗರ ಸ್ಥಳೀಯ ಸಂಸ್ಥೆಗಳವಾರು ಮತ್ತು ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಆ) ಇವರ ಪೈಕಿ ನೇರ ಪಾವತಿ, ಗುತ್ತಿಗೆ, ಹೊರಗುತ್ತಿಗೆ, ದಿನಗೂಲಿ ಹಾಗೂ ಸಮಾನ ಕೆಲಸಕ್ಕೆ ಸಮಾನ ವೇತನ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆ ಎಷ್ಟು ; (ಪ್ರತ್ಯೇಕ ವಿವರ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಒಟ್ಟು ಎಷ್ಟು ಜನ ಗುತ್ತಿಗೆ/ನೇರ ಪಾವತಿ ಆಧಾರದ ಪೌರಕಾರ್ಮಿಕರ ಸೇವೆಯನ್ನು ಖಾಯಂಗೊಳಿಸಲಾಗಿದೆ ; ಇನ್ನೂ ಖಾಯಂ ಆಗದೆ ಬಾಕಿ ಉಳಿದಿರುವ ಪೌರಕಾರ್ಮಿಕರ ಸಂಖ್ಯೆ ಎಷ್ಟು ;

(ಈ) ಸೇವೆಯಲ್ಲಿರುವ ಬಾಕಿ ಉಳಿದ ಎಲ್ಲಾ ವರ್ಗದ ಗುತ್ತಿಗೆ/ನೇರ ಪಾವತಿ ಪೌರಕಾರ್ಮಿಕರ ಸೇವೆಯನ್ನು ಸಂಪೂರ್ಣವಾಗಿ ಖಾಯಂಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಇದಕ್ಕೆ ನಿಗದಿಪಡಿಸಿದ ಕಾಲಮಿತಿ ಏನು ? (ವಿವರ ನೀಡುವುದು)

## ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯಲ್ಲಿನ ಯೋಜನೆಗಳ ಕುರಿತು ಮತ್ತು ಜಾಲವಾದ್ ಗ್ರಾಮದ ಪಶು ಆಸ್ಪತ್ರೆ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೦ (೧೦೩೭) ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪಶುಸಂಗೋಪನೆ ಹಾಗೂ ಮೀನುಗಾರಿಕೆ ಇಲಾಖೆಯಲ್ಲಿರುವ ಯೋಜನೆಗಳು ಯಾವುವು ; ಸಹಾಯಧನಗಳೇನು ; (ಸಂಪೂರ್ಣ ಮಾಹಿತಿಯನ್ನು ನೀಡುವುದು)

(ಆ) ಪಶುಗಳ ಆರೋಗ್ಯ ದೃಷ್ಟಿಯಿಂದ ರಾಜ್ಯದಲ್ಲಿ ಎಷ್ಟು ಪಶು ಆಸ್ಪತ್ರೆಯನ್ನು ಪ್ರಾರಂಭಿಸಲು ಸರ್ಕಾರ ಈ ಆರ್ಥಿಕ ವರ್ಷದಲ್ಲಿ ಗುರಿಯನ್ನು ಹಾಕಿಕೊಂಡಿದೆ ; (ಜಿಲ್ಲಾವಾರು ಮಾಹಿತಿಯನ್ನು ನೀಡುವುದು)

(ಇ) ರಾಜ್ಯದಲ್ಲಿ ಎಷ್ಟು ಪಶು ಆಸ್ಪತ್ರೆಯನ್ನು ಸ್ಥಾಪಿಸಲು ಬೇಡಿಕೆ ಇದೆ ; ಪಶು ಆಸ್ಪತ್ರೆಯನ್ನು ಸ್ಥಾಪಿಸಲು ಎಷ್ಟು ಶಾಸಕರು, ವಿಧಾನ ಪರಿಷತ್ ಸದಸ್ಯರು, ಸಂಸದರು, ರಾಜ್ಯಸಭಾ ಸದಸ್ಯರು ಹಾಗೂ ವಿವಿಧ ಗಣ್ಯರು ಶಿಫಾರಸ್ಸು ಮಾಡಿದ್ದಾರೆ ; (ವಿಧಾನಸಭಾವಾರು ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)

(ಈ) ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿ ತಾಲ್ಲೂಕಿನ ಜಾಲವಾದ್ ಗ್ರಾಮದಲ್ಲಿ ಪಶು ಆಸ್ಪತ್ರೆಯನ್ನು ಸ್ಥಾಪಿಸಲು ಗ್ರಾಮ ಪಂಚಾಯಿತಿಯಿಂದ ಅಗತ್ಯ ಭೂಮಿ ಒದಗಿಸಿದ್ದರು ಕೂಡ ಪಶು ಆಸ್ಪತ್ರೆಯನ್ನು ಮಂಜೂರು ಮಾಡದಿರುವುದಕ್ಕೆ ಕಾರಣಗಳೇನು ? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)

## ವಸತಿ ಇಲಾಖೆಯ ಯೋಜನೆಗಳಡಿಯಲ್ಲಿನ ಫಲಾನುಭವಿಗಳಿಗೆ ಸಹಾಯಧನ ಜಮೆಯಾಗದಿರುವ ಬಗ್ಗೆ

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೧ (೧೦೩೧) ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರದ ವಸತಿ ಇಲಾಖೆಯ ಅಡಿಯಲ್ಲಿ ಬರುವ ಬಸವ ವಸತಿ ಯೋಜನೆ ಹಾಗೂ ಡಾ: ಬಿ.ಆರ್. ಅಂಬೇಡ್ಕರ್ ನಿವಾಸ ಯೋಜನೆ (ಗ್ರಾಮೀಣ) ಅಡಿಯಲ್ಲಿ ಅರ್ಹ ಫಲಾನುಭವಿಗಳು ವಿವಿಧ ಹಂತದಲ್ಲಿ ಮನೆಗಳನ್ನು ನಿರ್ಮಿಸಿಕೊಂಡಾಗ ರಾಜೀವ್ ಗಾಂಧಿ ವಸತಿ ನಿಗಮದಿಂದ ಸಹಾಯ ಧನವನ್ನು ಫಲಾನುಭವಿಗಳ ಖಾತೆಗೆ ಎಫ್‌ಟಿಆರ್ ಮೂಲಕ ಜಮೆ ಮಾಡಲಾಗುತ್ತದೆ, ಆದರೂ ಕೂಡ ಅರ್ಹ ಫಲಾನುಭವಿಗಳ ಖಾತೆಗೆ ಇದುವರೆಗೂ ಸಹಾಯಧನ ಜಮೆಯಾಗದೆ, ಇರಲು ವಿಳಂಬವಾಗಿರುವುದಕ್ಕೆ ಕಾರಣಗಳೇನು ;

(ಆ) ಸದರಿ ವಿಷಯಕ್ಕೆ ಸಂಬಂಧಿಸಿದಂತೆ ೦೧–೦೪–೨೦೨೫ ರಿಂದ ಇಲ್ಲಿಯವರೆಗೆ ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಸಹಾಯಧನ ಪಡೆಯಲು ಗುರುತಿಸಲಾದ ಫಲಾನುಭವಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಸರ್ಕಾರವು ಸಮಸ್ಯೆಯನ್ನು ನಿವಾರಿಸಲು ಕೈಗೊಂಡಿರುವ ಕ್ರಮಗಳೇನು ; ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ?

## ಮಾರುಕಟ್ಟೆಯನ್ನು ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸುವ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) –**

೧೦೨ (೯೭೩) ಪೌರಾಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ನಗರದಲ್ಲಿ ನಗರಸಭೆ ವತಿಯಿಂದ ಜಯಚಾಮರಾಜೇಂದ್ರ ಮಾರುಕಟ್ಟೆಯನ್ನು ಎಷ್ಟು ಕೋಟಿ ರೂಪಾಯಿ ವೆಚ್ಚದಲ್ಲಿ ಪುನರ್ ನಿರ್ಮಿಸಲಾಗಿದೆ ; ಇದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡಿರುವ ಅನುದಾನ ಎಷ್ಟು ;

(ಆ) ಈ ನೂತನ ಮಾರುಕಟ್ಟೆಯಲ್ಲಿ ಇರುವ ವಾಣಿಜ್ಯ ಮಳಿಗೆಗಳ ಒಟ್ಟು ಸಂಖ್ಯೆ ಮತ್ತು ಪ್ರತಿ ಮಳಿಗೆಯ ವಿಸ್ತೀರ್ಣ ಎಷ್ಟು ; ಇಲ್ಲಿ ಗ್ರಾಹಕರಿಗೆ ಹಾಗೂ ವರ್ತಕರಿಗೆ ಕಲ್ಪಿಸಿರುವ ಮೂಲಸೌಕರ್ಯಗಳಾವುವು ; (ವಿವರವಾದ ಮಾಹಿತಿ ನೀಡುವುದು)

(ಇ) ವಾಣಿಜ್ಯ ಮಳಿಗೆಗಳನ್ನು ಹಂಚಿಕೆ ಮಾಡುವಾಗ ಈ ಹಿಂದೆ ಈ ಸ್ಥಳದಲ್ಲಿ ವ್ಯಾಪಾರ ಮಾಡುತ್ತಿದ್ದವರಿಗೆ ಆದ್ಯತೆ ನೀಡಲಾಗುವುದೇ ; ಅಥವಾ ಲಾಟರಿ ಮೂಲಕ ಮಳಿಗೆಗಳನ್ನು ಹಂಚಿಕೆ ಮಾಡಲಾಗುವುದೇ ;

(ಈ) ಈ ಹಿಂದೆ ಇಲ್ಲಿ ವ್ಯಾಪಾರ ಮಾಡುತ್ತಿದ್ದ ವ್ಯಾಪಾರಿಗಳು ನಗರಸಭೆಗೆ ಪೂರ್ಣ ಪ್ರಮಾಣದಲ್ಲಿ ಬಾಡಿಗೆ ಮೊತ್ತ ಪಾವತಿಸಿದ್ದಾರೆಯೇ ; ಪಾವತಿಸಿಲ್ಲದಿದ್ದರೆ, ಬರಬೇಕಾಗಿರುವ ಬಾಡಿಗೆ ಮೊತ್ತ ಎಷ್ಟು ;

(ಉ) ಪ್ರತಿ ಮಳಿಗೆಗೆ ನಿಗದಿಪಡಿಸಲು ಉದ್ದೇಶಿಸಿರುವ ಮಾಸಿಕ ಬಾಡಿಗೆ, ಮುಂಗಡ ಹಣ ಎಷ್ಟು ; ಮಳಿಗೆಗಳನ್ನು ಈವರೆವಿಗೂ ಹಂಚಿಕೆ ಮಾಡದಿರಲು ಕಾರಣಗಳೇನು ; (ವಿವರವಾದ ಮಾಹಿತಿ ನೀಡುವುದು)

(ಊ) ಈ ಮಾರುಕಟ್ಟೆಯ ಒಟ್ಟು ವಿಸ್ತೀರ್ಣ ಎಷ್ಟು ; ಮೊದಲಿಗೆ ಈ ಮಾರುಕಟ್ಟೆಗೆ ಯಾವ ವರ್ಷದಲ್ಲಿ ಯಾರು ಶಂಕುಸ್ಥಾಪನೆ ನೆರವೇರಿಸಿದ್ದರು ; ಯಾರು ಉದ್ಘಾಟಿಸಿದ್ದರು ; ಈ ನೂತನ ಮಾರುಕಟ್ಟೆಯ ಮಳಿಗೆಗಳನ್ನು ಯಾವ ಕಾಲಮಿತಿಯೊಳಗೆ ಹಂಚಿಕೆ ಮಾಡಲಾಗುವುದು ?

## ಮಳೆ ಕೊರತೆಯಲ್ಲಿರುವ ಕಲಬುರಗಿ ರೈತರಿಗೆ ವಿಶೇಷ ಪ್ಯಾಕೇಜ್

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೩ (೯೭೬) ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ಬಿತ್ತನೆಗೆ ನಿಗದಿಪಡಿಸಿದ ಒಟ್ಟು ಗುರಿ ಎಷ್ಟು ; ಆ ಪೈಕಿ ಜೂನ್ ಮೂರನೇ ವಾರದ ಅಂತ್ಯಕ್ಕೆ ಕೇವಲ ೨೮,೯೦೦ ಹೆಕ್ಟೇರ್‌ನಷ್ಟು ಮಾತ್ರ ಬಿತ್ತನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮಳೆ ಅಭಾವದಿಂದ ಬಿತ್ತನೆ ಗುರಿಯಲ್ಲಿ ಶೇ. ೨೦ರಷ್ಟು ಮಾತ್ರ ಸಾಧನೆಯಾಗಿದ್ದು, ಇದರಿಂದಾಗಿ ರೈತರಲ್ಲಿ ಎದುರಾಗಿರುವ ಬರಗಾಲದ ಭೀತಿ ನಿವಾರಿಸಲು ಕೈಗೊಂಡಿರುವ ತುರ್ತು ಕ್ರಮಗಳೇನು ;

(ಇ) ರಾಜ್ಯದಲ್ಲಿ ತೀವ್ರ ಹಾಗೂ ಸಾಮಾನ್ಯ ಮಳೆ ಕೊರತೆ ಎದುರಿಸುತ್ತಿರುವ ಹೋಬಳಿಗಳ ಸಂಖ್ಯೆ ಎಷ್ಟು ; ಈ ಭಾಗದ ರೈತರಿಗೆ ಪರ್ಯಾಯ ಬೆಳೆಗಳ ಬಿತ್ತನೆ ಬೀಜ ಹಾಗೂ ರಸಗೊಬ್ಬರ ವಿತರಣೆಗೆ ಸರ್ಕಾರ ಮಾಡಿಕೊಂಡಿರುವ ಸಿದ್ಧತೆಗಳೇನು ;

(ಈ) ವಿಜಯಪುರ, ಕಲಬುರಗಿ, ಕೊಪ್ಪಳ ಸೇರಿದಂತೆ ಮಳೆ ಕೊರತೆಯಿಂದ ಬಿತ್ತನೆ ಕುಂಠಿತಗೊಂಡಿರುವ ಜಿಲ್ಲೆಗಳ ರೈತರ ನೆರವಿಗಾಗಿ ವಿಶೇಷ ಪ್ಯಾಕೇಜ್ ಅಥವಾ ಪರಿಹಾರ ಧನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು ? (ವಿವರ ನೀಡುವುದು)

## ಮೈಸೂರಿನ ಸ್ಥಳೀಯ ಸಂಸ್ಥೆಗಳಲ್ಲಿನ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೪ (೧೦೩೪) ಪೌರಾಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ (ಹಂತ–೪) ಯಡಿಯಲ್ಲಿ ಮೈಸೂರು ಜಿಲ್ಲೆಯ ವಿವಿಧ ನಗರ ಸ್ಥಳೀಯ ಸಂಸ್ಥೆಗಳಿಗೆ ಮಂಜೂರಾದ ಒಟ್ಟು ಅನುದಾನವೆಷ್ಟು ; (ಸಂಸ್ಥೆವಾರು ವಿವರ ನೀಡುವುದು)

(ಆ) ಮಂಜೂರಾದ ಅನುದಾನದಲ್ಲಿ ಇದುವರೆಗೆ ಬಿಡುಗಡೆಯಾಗಿರುವ ಮತ್ತು ಬಿಡುಗಡೆ ಆಗದೆ ಬಾಕಿ ಇರುವ ಮೊತ್ತವೆಷ್ಟು ; (ವಿವರ ನೀಡುವುದು)

(ಇ) ಈ ಯೋಜನೆಯಡಿ ಜಿಲ್ಲೆಯಲ್ಲಿ ಅನುಮೋದನೆಗೊಂಡ ಒಟ್ಟು ಕಾಮಗಾರಿಗಳೆಷ್ಟು ; ಅವುಗಳಲ್ಲಿ ಪೂರ್ಣಗೊಂಡ, ಪ್ರಗತಿಯಲ್ಲಿರುವ ಹಾಗೂ ಪ್ರಾರಂಭವಾಗದ ಕಾಮಗಾರಿಗಳ ಸಂಖ್ಯೆ ಎಷ್ಟು ; (ಸಂಸ್ಥೆವಾರು ವಿವರ ನೀಡುವುದು)

(ಈ) ಅನುದಾನ ಬಿಡುಗಡೆ ಹಾಗೂ ಕಾಮಗಾರಿಗಳು ಪೂರ್ಣಗೊಳ್ಳಲು ವಿಳಂಬವಾಗಿದ್ದರೆ ಕಾರಣವೇನು ; ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ನಿಗದಿಪಡಿಸಿರುವ ಕಾಲಮಿತಿ ಏನು ?

## ಆರ್ಥಿಕ ಉತ್ತೇಜನ ನೀಡುವ ಬಗ್ಗೆ

**ಶ್ರೀ ರಘು ಆರ್. (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೫ (೧೦೨೯) ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪಶುಸಂಗೋಪನೆ ಮತ್ತು ಮೀನುಗಾರಿಕೆಯನ್ನು ಉತ್ತೇಜಿಸಲು ಪದವೀಧರರಿಗೆ ಅಥವಾ ವಿದ್ಯಾವಂತ ನಿರುದ್ಯೋಗಿಗಳಿಗೆ ವಿಶೇಷ ತರಬೇತಿ ಕೊಡಲು ಪ್ರತ್ಯೇಕ ತರಬೇತಿ ಕೇಂದ್ರ ತೆರೆಯಬೇಕೆಂಬ ಉದ್ದೇಶ ಸರ್ಕಾರದ ಮುಂದಿದೆಯೇ ; (ಮಾಹಿತಿ ನೀಡುವುದು)

(ಆ) ಪಶು ಸಂಗೋಪನೆ ಮತ್ತು ಮೀನುಗಾರಿಕೆ ಅವಲಂಬಿಸಿ ಸ್ವಾವಲಂಬನೆ/ ಸ್ವಯಂ ಉದ್ಯೋಗಕ್ಕಾಗಿ ಆರ್ಥಿಕ ಉತ್ತೇಜನ ನೀಡಲು ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಂಡಿದೆ ? (ಮಾಹಿತಿ ನೀಡುವುದು)

**ಜ್ಯೋತಿ**
ಕಾರ್ಯದರ್ಶಿ (ಪ್ರ.)
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ – ಪ್ರತಿಗಳು

**List of Questions**
**for Oral Answers**

**Total No. of**
**Questions - 15**

# LIST - 7

# KARNATAKA LEGISLATIVE COUNCIL

## ONE HUNDRED AND FIFTY NINTH SESSION

## Tuesday, the 25th August, 2026

---

**GROUP - II**

1. Minister for Housing
2. Minister for Agriculture
3. Minister for Sugar and Textiles
4. Minister for Co-operation
5. Minister for Animal Husbandry and Sericulture
6. Minister for Municipal Administration

---

**SCHEMES OF FARMERS BY THE**
**DEPARTMENT OF ANIMAL HUSBANDRY**

**Sri. Pradeep Shettar (Local Authorities Constituency) -**

91 (1051) Will the Minister for Animal Husbandry and Sericulture be pleased to state :-

(a) whether the veterinary hospitals have been constructed in the State according to the livestock census ; (disrictwise information be furnished)

(b) the particulars of schemes that have been formulated by the Department of Animal Husbandry to facilitate to the farmers and dairy farming ; (schemewise information be furnished)

(c) out of the said schemes, the grant that has been released to Dharwad district ; (schemewise information be furnished)

(d) the number of applications that have been submitted and rejected to get the facility of the said schemes to the Dharwad district from the year 2023 till date ? (districtwise/ talukwise/schemewise information be furnished)

## HOUSES UNDER HOUSING SCHEMES

**Sri. Jagadev Guttedar (Elected by Legislative Assembly) -**

92 (1003) Will the Minister for Housing be pleased to state :-

(a) the number of houses that have been sanctioned to Kalagi taluk under various housing schemes of the State Government during the last 3 years ; (panchayatwise details be furnished)

(b) the various stages of the sanctioned houses ; out of which, the houses which have been completed ; the number of beneficiaries to whom the amount has been credited to their account and pending for the same ;

(c) the date on which the amount would be credited to the account of the beneficiaries to whom the payments are pending ? (information be furnished)

## VACANT POSTS IN THE DEPARTMENT OF ANIMAL HUSBANDRY

**Sri. M.L. Anil Kumar (Local Authorities Constituency) -**

93 (1073) Will the Minister for Animal Husbandry and Sericulture be pleased to state :-

(a) the number of veterinary hospitals in Kolar and Chikkaballapur district ; the number of posts that have been sanctioned to these hospitals ; the number of permanent posts which are working at present ; (talukwise complete information be furnished)

(b) the number of outsourced and vacant posts at present ; the steps taken by the Government to fill up the said posts ;

(c) the grant that is being provided for the purchase of medicines to all veterinary hospitals in each year of the State ? (complete information regarding districtwise grant that has been provided be furnished)

## POSTS SANCTIONED IN THE DEPARTMENT OF ANIMAL HUSBANDRY

**Sri. Kushalappa M.P. (suja) (Local Authorities Constituency) -**

94 (1061) Will the Minister for Animal Husbandry and Sericulture be pleased to state :-

(a) the number of posts of veterinary doctors and their staff that have been sanctioned in Kodagu district ; the number of vacant posts at present ; the steps taken by the Government to fill up vacant posts ;

(b) the total number of veterinary hospital and clinics in Kodagu district ; the number of centres that have not own building and that require repair ;

(c) whether there is an arrangement of mobile veterinary units for emergency veterinary service for livestock in hilly area and distant villages of Kodagu district ; if not, whether the step would be taken by the Government to commence such units ;

(d) the grant that has been provided for dairy farmers of Kodagu district for purchasing of cow, buffalo, construction of shed, fodder and other facilities during the last three years ; the number of beneficiaries who have been benefited from the same ?

## RELEASE OF GRANT UNDER ANUGRAHA SCHEME

**Sri. Chidanand M.Gowda (Graduates' Constituency) -**

95 (1058) Will the Minister for Animal Husbandry and Sericulture be pleased to state :-

(a) the date on which the Anugraha Scheme has been implemented by the State Government ; the intension of the said scheme ;

(b) the amount of compensation that would be disbursed under the Anugraha Scheme for the death of animals such as cows, buffaloes, sheep, goat etc ;

(c) the grant that has been earmarked in the budget every year for the Anugraha Scheme ; the grant that has been released ; (yearwise details be furnished)

(d) the number of livestock and sheep, goats that have been died accidentally in the State from 2023-24 till date ; the compensation that has been provided ; the pending amount of the compensation ; (districtwise and yearwise details be furnished)

(e) whether it has come to the notice of the Government that the livestock rearers and shepherds who have lost their livestock are waiting for compensation ; if so, the steps taken by the Government to release the grant immediately ?

## REGARDING VARIOUS HOUSING SCHEMES

**Sri. Sunilgouda Patil (Local Authorities Constituency) -**

96 (1076) Will the Minister for Housing be pleased to state :-

(a) whether the proposal is before the Government to sanction the houses to Gram Panchayats under the various housing schemes ; if so, the timelimit within which the number of houses would be sanctioned to each Gram Panchayats ;

(b) the details of schemewise, yearwise and Gram Panchayatwise houses that have been sanctioned under the various housing schemes to Vijayapur and Bagalkot districts during the last three years be furnished ;

(c) whether the new houses have been sanctioned under the various housing schemes to Vijayapur and Bagalkot districts ? (yearwise details be furnished)

## SERVICE OF "1962 MOBILE VETERINARY UNITS" IN BIDAR DISTRICT

**Dr. M.G. Muley (Elected by Legislative Assembly) -**

97(1018) Will the Minister for Animal Husbandry and Sericulture be pleased to state :-

(a) whether it has come to the notice of the Government that there is a demand from the farmers for the service of 1962 mobile veterinary units in Bidar district ;

(b) whether it is true that the current service is available from 9 am to 5 pm and the hardship is being caused to emergency treatment at night ; whether the step would be taken to extend the service hours and sanctioning additional vehicles ;

(c) the steps taken to fill up veterinary doctors and staff which are lying vacant in various mobile units in the district ;

(d) whether it is true that the milk production has been increased in the district from this scheme ; if so, the details of the plan that has been framed for effective extension of this service to all parts of the district ?

## PM MITHRA SCHEME

**Sri. M. Nagaraju (Elected by Legislative Assembly) -**

98 (1007) Will the Minister for Sugar and Textiles be pleased to state :-

(a) the loss that has been occurred to Karnataka which is contributing 20% in the total textile export of India due to middle east conflict ; the steps taken by the Government in this regard ;

(b) the details of share of the Central and State Government in the "Pradhan Mantri Mega Integrated Textile Region and Apparel (PM MITRA)" scheme in Kalaburagi which is one of the seven places in the country ;

(c) the grant that has been received by the Central Government for this scheme and the present stage of the same ? (information be furnished)

## REGULARIZATION OF POURAKARMIKAS IN THE STATE

**Sri. Shivanna B.S. (Elected by Legislative Assembly) -**

99 (984) Will the Minister for Municipal Administration be pleased to state :-

(a) the total number of pourakarmikas who are working in city corporations, City Municipal Corporations, Town Municipal Corporations and Town Panchayats of the State at present ; (urban local bodieswise and districtwise complete details be furnished)

(b) out of them, the number of pourakarmikas who are working on the basis of direct payment, contract, outsourcing, daily wage and equal pay for equal work ; (separate details be furnished)

(c) the total number of pourakarmikas who are working based on contract/direct payment have been regularized during the last three years in the State ; the number of remaining pourakarmikas not yet been regularized ;

(d) the measures taken by the Government to regularize the service of remaining all category pourakarmikas who are in service on contract/direct payment ; the timelimit has been fixed thereof ? (details be furnished)

## SCHEMES IN DEPARTMENT OF ANIMAL HUSBANDRY AND FISHERIES AND VETERINARY HOSPITAL IN JALAWADA VILLAGE

**Sri. Keshava Prasad S. (Elected by Legislative Assembly) -**

100 (1037) Will the Minister for Animal Husbandry and Sericulture be pleased to state :-

(a) the particulars of schemes in the Department of Animal Husbandry and Fisheries of the State ; the particulars of subsidies thereof ; (complete information be furnished)

(b) with a view of cattle health, the target that has been set by the Government to establish number of veterinary hospital in the State during the financial year ; (districtwise information be furnished)

(c) the demand to establish number of veterinary hospital in the State ; the details of the number of MLAs, MLCs, MPs, Member of Rajya Sabha and various dignitaries who have recommended to establish the same ; (assembly constituencywise complete information be furnished)

(d) the reasons for not sanctioning the veterinary hospital eventhough the Gram Panchayat has provided required land to establish the veterinary hospital in the Jalawada village of Devara Hipparagi taluk in Vijayapur district ? (complete information be furnished)

## NON-CREDITED SUBSIDY TO BENEFICIARIES UNDER THE SCHEMES OF THE HOUSING DEPARTMENT

**Sri. P.H. Pujar (Local Authorities Constituency) -**

101 (1031) Will the Minister for Housing be pleased to state :-

(a) when eligible beneficiaries construct the houses in various stages under the Basava Housing Scheme and Dr. B.R. Ambedkar Niwas Scheme (rural) which are coming under the Housing Department of the Government, then the subsidy is being credited to the account of beneficiaries through FTR (fund transfer request) by Rajiv Gandhi Housing Corporation, however the reasons for the delay that the subsidy has not been credited to the account of eligible beneficiaries so far ;

(b) with regard to the said subject, the number of beneficiaries who have been identified to receive the subsidy in Bagalkot and Vijayapur district from 1.04.2025 till date ; (districtwise and talukwise information be furnished)

(c) the steps taken by the Government to resolve the problems ; the timelimit within which the step would be taken up ?

## REGARDING OPENING OF MARKET TO PUBLIC USE

**Sri. Madhu G. Madegowda (Graduates' Constituency) -**

102 (973) Will the Minister for Municipal Administration be pleased to state :-

(a) the cost in crores of rupees in which the Jayachamarajendra market that has been reconstructed by the City Municipal Council in Mandya city ; the grant that has been provided by the Central Government and State Government for the same ;

(b) the total number of commercial stalls in this new market and the extent of each stall ; the particulars of basic facilities that have been provided for the customers and traders therein ; (detailed information be furnished)

(c) whether the preference would be given to those who were previously doing business at this place while allocating commercial stalls or whether the stalls would be allocated through the lottery system ;

(d) whether the traders who were previously doing business therein have been paid complete amount of rent to the City Municipal Council ; if not, the details of the outstanding amount of rent which has to be accrued ;

(e) the monthly rent and advance amount which has been intended to be fixed for each stall ; the reason for not allocating the stalls so far ; (detailed information be furnished)

(f) the total extent of this market ; the year in which and the person who laid the foundation stone for this market initially ; the particular of person who have inaugurated it ; the timelimit within which the stalls of this new market would be allocated ?

## SPECIAL PACKAGE FOR FARMERS OF KALABURAGI

**Sri. Thippanappa Kamaknoor (Elected by Legislative Assembly) -**

103 (976) Will the Minister for Agriculture be pleased to state :-

(a) the total target that has been fixed for the sowing in the State during monsoon season in the current year ; whether it has come to the notice of the Government that only 28,900 hectare of sowing has been completed till the end of third week of June out of total land ;

(b) only 20% of sowing target has been achieved due to the rainfall deficit, the emergency measures that have been taken to resolve the threat of draught season that is being faced among farmers therein ;

(c) the number of hoblies which are facing severe and general rainfall deficit in the State ; the preparation of the Government for the distribution of sowing seeds for alternative crops and fertilizers for farmers of this region ;

(d) whether the steps would be taken to release special package or compensation amount for the assistance of farmers of the districts in which sowing has been stagnated due to the rainfall deficit including Vijayapura, Kalaburagi and Koppal district ? (details be furnished)

## CHIEF MINISTER'S NAGAROTHANA SCHEME IN LOCAL BODIES OF MYSURU

**Sri. C.N. Manje Gowda (Local Authorities Constituency) -**

104 (1034) Will the Minister for Municipal Administration be pleased to state :-

(a) the total grant that has been sanctioned to various urban local bodies in Mysuru district under the Chief Minister's Nagarothana Scheme (phase-4) ; (urban local bodywise details be furnished)

(b) out of the sanctioned grant, the amount that has been released and pending so far ; (details be furnished)

(c) the total number of the works that have been approved in the district under this scheme ; out of which, the number of works that have been completed, ongoing and not yet commenced ; (local bodywise details be furnished)

(d) the reasons for the delay in the release of grant and completion of works ; the timelimit that has been prescribed by the Government to complete the remaining works ?

## PROVIDING FINANCIAL ASSISTANCE

**Sri. Raghu R. (Elected by Legislative Assembly) -**

105 (1026) Will the Minister for Animal Husbandry and Sericulture be pleased to state :-

(a) whether the intension is before the Government to commence the separate training centre to provide the special training for graduates or educated unemployed youths to promote the animal husbandry and fisheries ; (information be furnished)

(b) the particulars of programmes that have been taken by the Government to provide the financial assistance for self-reliant/self employment depending on animal husbandry and fisheries ? (details be furnished)

**JYOTI**
Secretary (I/c.)
Karnataka Legislative Council

Government Press, Vikasa Soudha Unit, Bengaluru, WD-292 Copies